ಇ) ಈ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ? ಈ ಹುದ್ದೆಗಳನ್ನು ನೇಮಕ ಮಾಡಿಕೊಳ್ಳಲಾಗುವುದು?

ಈ) ನೇಮಕ ಮಾಡಿಕೊಳ್ಳುವುದಾದರೆ ಯಾವಾಗ ನೇಮಕ ಮಾಡಿಕೊಳ್ಳಲಾಗುವುದು.

ಡಾ॥ ಹೆಚ್. ಸಿ. ಮಹದೇವಪ್ಪ (ಆರೋಗ್ಯ ಕುಟುಂಬ ಕಲ್ಯಾಣ ಸಚಿವರ ಪರವಾಗಿ) ಶ್ರೀ ಎಂ. ಸಿ. ನಾಣಯ್ಯ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

ಅ) ಬಂದಿದೆ.

ಆ) ಖಾಲಿ ಖಾಲಿ ಹುದ್ದೆಗಳ ವಿವರ :

1)	ವೈದ್ಯರು	- 6	ಹುದ್ದೆಗಳು
2)	ಇತರೆ ಸಿಬ್ಬಂದಿ	- 14	ಹುದ್ದೆಗಳು
	ಒಟ್ಟು	- **20**	**ಹುದ್ದೆಗಳು**

ಇ) ವೈದ್ಯರ ಖಾಲಿ ಹುದ್ದೆಗಳನ್ನು ಬಡ್ತಿ ಮೂಲಕ ಭರ್ತಿ ಮಾಡಲಾಗುವುದು. ಇತರೆ ಹುದ್ದೆಗಳನ್ನು ನೇಮಕಾತಿ ಮೂಲಕ ತುಂಬಲಾಗುವುದು.

ಈ) ಆದ್ಯತೆ ಮೇರಿಗೆ ನೇಮಕಾತಿ ಮಾಡಿಕೊಳ್ಳಲು ಕ್ರಮ ತೆಗೆದುಕೊಳ್ಳಲಾಗುವುದು.

ಸೋಮವಾರ ಪೇಟೆ ತಾಲ್ಲೂಕಿನ ಸೊರಲಬ್ಬಿಯಲ್ಲಿ ಹೈಸ್ಕೂಲ್ ಪ್ರಾರಂಭಿಸುವುದು

739 - ಶ್ರೀ ಎಂ.ಸಿ. ಅಪ್ಪಚ್ಚು ರಂಜನ್, (ಸೋಮವಾರಪೇಟೆ) : ಮಾನ್ಯ ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು ಈ ಕಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸೊರಲಬ್ಬಿಯಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ತೆರೆಯಲು ಸರ್ಕಾರ ಯೋಚಿಸಿದೆಯೇ;

ಆ) ಶಾಲೆ ಪ್ರಾರಂಭಿಸಬೇಕಿರುವ ಸ್ಥಳವು ಸರ್ಕಾರಕ್ಕೆ ಸೇರಿದೆಯೇ;

ಇ) ಹಾಗಿದ್ದಲ್ಲಿ ಈ ಶಾಲೆ ಪ್ರಾರಂಭಿಸಲು ಅನುಮತಿ ನೀಡುವಲ್ಲಿ ವಿಳಂಬವಾಗುತ್ತಿರುವ ಕಾರಣಗಳೇನು?

ಈ) ಈ ಶಾಲೆ ಪ್ರಾರಂಭಿಸುವ ಸ್ಥಳದಿಂದ ಸುತ್ತಮುತ್ತಲೂ ಸಾಕಷ್ಟು ಹಳ್ಳಿಗಳು ಇದ್ದು, ಈ ಸ್ಥಳ ಮಧ್ಯ ಭಾಗದಲ್ಲಿರುವ ಸರ್ಕಾರಕ್ಕೆ ತಿಳಿದಿದೆಯೇ?

ಉ) ಶಾಲೆ ಪ್ರಾರಂಭಿಸಲು ಈಗಿರುವ ಅಡಚಣೆಗಳೇನು?

ಊ) ಈ ಶಾಲೆಯ ಪ್ರಾರಂಭಕ್ಕೆ ಜಿಲ್ಲಾ ಪಂಚಾಯಿತಿ ವತಿಯಿಂದ ಹಣವನ್ನೇನಾದರೂ ಕಾಯ್ದಿರಿಸಲಾಗಿದೆಯೇ, ಪೂರ್ಣ ಮಾಹಿತಿಯನ್ನು ಒದಗಿಸುವುದು?

ಶ್ರೀ ಪುಟ್ಟಸ್ವಾಮಿಗೌಡ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು) :

ಅ) 1993-94ನೇ ಸಾಲಿನಲ್ಲಿ ಸೂರಲಬ್ಬಿಯಲ್ಲಿ ಸರ್ಕಾರಿ ಪ್ರೌಢ ಶಾಲೆಯನ್ನು ಪ್ರಾರಂಭಿಸಲಾಗಿರುತ್ತದೆ.

ಆ) ಪ್ರೌಢಶಾಲೆಗೆ ಅವಶ್ಯವಾದ ಕಟ್ಟಡ ಕಟ್ಟಲು ನಿವೇಶನದ ವಿವಾದವಿಲ್ಲದ್ದರಿಂದ ಇತ್ಯರ್ಥಗೊಂಡಿರುವುದಿಲ್ಲ.

ಇ) ಈಗಾಗಲೇ ಸೂರಲಬ್ಬಿ ಗ್ರಾಮದಲ್ಲಿ ಪ್ರೌಢ ಶಾಲೆಯು ಪ್ರಾರಂಭಿಸಿದ್ದು ಶಾಲೆಯು ತಾತ್ಕಾಲಿಕವಾಗಿ ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತಿದೆ.

ಈ) ಪ್ರೌಢ ಶಾಲೆಯು ಸೂರಲಬ್ಬಿ ಗ್ರಾಮದಲ್ಲಿಯೇ ತಾತ್ಕಾಲಿಕವಾಗಿ ಪ್ರಾಥಮಿಕ ಶಾಲಾ ಕಟ್ಟಡದಲ್ಲಿಯೇ ನಡೆಯುತ್ತಿದೆ. ಆದರೆ ಪ್ರೌಢಶಾಲೆಗೆ ಶಾಶ್ವತ ಕಟ್ಟಡ ಕಟ್ಟಲು ನಿವೇಶನ ಇರುವುದಿಲ್ಲ. ಸುತ್ತಮುತ್ತಲ ಗ್ರಾಮಸ್ಥರು ಸೂರಲಬ್ಬಿ ಗ್ರಾಮದಿಂದ ದೂರದ ಕುಗ್ರಾಮಗಳಿಗೆ ಗ್ರಾಮದಲ್ಲಿ ಕಟ್ಟಬೇಕೆಂದು, ಇನ್ನೂ ಕೆಲವರು ಪ್ರಾಥಮಿಕ ಶಾಲಾ ಪಕ್ಕದಲ್ಲಿ ಕಟ್ಟಡವೇಕೆಂದು ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯವಿದೆ.

ಉ) ಈಗಾಗಲೇ ಪ್ರೌಢಶಾಲೆ ಪ್ರಾರಂಭವಾಗಿ ತರಗತಿಗಳು ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತಿವೆ.

ಊ) ಪ್ರೌಢ ಶಾಲಾ ನಿರ್ಮಿಸುವ ಕಟ್ಟಡದ ಜಮೀನಿನ ಬಗ್ಗೆ ವಿವಾದವಿದ್ದು, ಸಾರ್ವಜನಿಕರಲ್ಲಿ ಭಿನ್ನಾಭಿಪ್ರಾಯವಿದೆ. 1993ರಿಂದ ಸದರಿ ಶಾಲೆಗೆ ಕಟ್ಟಡ ನಿರ್ಮಾಣ ಮಾಡಲು ಯೋಜನಾ ಕಾರ್ಯಕ್ರಮದಡಿಯಲ್ಲಿ ಸಾಕಷ್ಟು ಅನುದಾನ ಕಾಯ್ದಿರಿಸಿದ್ದು, ವಿವಾದದಿಂದ ಕೆಲಸ ಪ್ರಾರಂಭಗೊಂಡಿರುವುದಿಲ್ಲ.

ಉತ್ತರ ಕೊಡಗು ಜಿಲ್ಲೆಯ ಹೆಬ್ಬಾಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭ

740 - ಶ್ರೀ ಎಂ. ಪಿ. ಅಪ್ಪಚ್ಚುರಂಜನ್ (ಸೋಮವಾರ ಪೇಟೆ) : ಮಾನ್ಯ ಉನ್ನತ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಉತ್ತರ ಕೊಡಗು ಹೆಬ್ಬಾಲೆಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಇದಕ್ಕೆ ಸಂಬಂಧಪಟ್ಟಂತೆ ಸ್ಥಳೀಯ ಸ್ಥಾಯಿ ಸಮಿತಿ ರಚಿಸಿರುವುದು ನಿಜವೇ;

ಇ) ಹಾಗಿದ್ದಲ್ಲಿ ಇದಕ್ಕೆ ಸರ್ಕಾರದಿಂದ ಮಂಜೂರಾತಿ ದೊರೆತಿದೆಯೇ,

ಈ) ಹಾಗಿಲ್ಲದಿದ್ದಲ್ಲಿ ಯಾವಾಗ ಮಂಜೂರಾತಿ ನೀಡಲಾಗುವುದು ?

ಶ್ರೀ ವಿ. ಮಂಜುನಾಥ್ (ಉನ್ನತ ಶಿಕ್ಷಣ ಸಚಿವರು) :

ಅ) ಹೌದು.